ದಿ:-21/08/26 SL NO:-33.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಶೂನ್ಯ ವೇಳೆಯ ಪ್ರಸ್ತಾವಕ್ಕೆ ಉತ್ತರಿಸುವ ಕುರಿತು.**

*****

**ವಿಷಯ:-**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಪೂರೈಸಬೇಕಾದ ಸಮವಸ್ತ್ರ, ಶೂ ಹಾಗೂ ಸಾಕ್ಸ್ ಗಳ ವಿತರಣೆಯಲ್ಲಿ ವಿಳಂಬವಾಗಿರುವ ಆರೋಪಗಳು ಇದೀಗ ಗಂಭೀರ ಚರ್ಚೆಗೆ ಕಾರಣವಾಗಿದೆ. 2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರ್ಕಾರಿ ಮುಸ್ಲಿಂ ವಸತಿ ಶಾಳೆಗಳು ಹಾಗೂ ಡಾ|| ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ವಿದ್ಯಾರ್ಥಿಗಳಿಗೆ ಎರಡು ಜೊತೆ ಸಿದ್ಧಪಡಿಸಿದ ಸಮವಸ್ತ್ರ, ಎರಡು ಜೊತೆ ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಪೂರೈಸಲು ಸುಮಾರು ರೂ.8.72 ಕೋಟಿ ಮೌಲ್ಯದ ಟೆಂಡರ್ ದಾಖಲೆಗಳ ಪ್ರಕಾರ ವಿದ್ಯಾರ್ಥಿಗಳ ನೈಜ ದಾಖಲಾತಿಗೆ ಅನುಗುಣವಾಗಿ ಶಾಲಾವಾರು ಬಂಡಲ್ಗಳನ್ನು ಸಿದ್ಧಪಡಿಸಿ, ವಿದ್ಯಾರ್ಥಿಗಳ ಅಳತೆಗೆ ತಕ್ಕಂತೆ ಸಮವಸ್ತ್ರಗಳನ್ನು ನೇರವಾಗಿ ಶಾಲೆಗಳಿಗೆ ಪೂರೈಸಬೇಕು. ಗುಣಮಟ್ಟ ಪ್ರಮಾಣ ಹಾಗೂ ಅಳತೆ ಪರಿಶೀಲಿಸಿದ ಬಳಿಕವೇ ಶಾಲಾ ಮುಖ್ಯಸ್ಥರಿಂದ ಸ್ವೀಕೃತಿ ಪಡೆಯಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಆದರೆ ಶೈಕ್ಷಣಿಕ ವರ್ಷ ಆರಂಭವಾಗಿ ತಿಂಗಳು ಕಳೆದರೂ ಕೆಲವು ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಹಾಗೂ ಸಾಕ್ಸ್ ಗಳನ್ನು ಇನ್ನೂ ತಲುಪಿಲ್ಲವೇ? ಎಂಬ ಪ್ರಶ್ನೆ ಇದೀಗ ಎದುರಾಗಿದೆ.

ಒಂದೇ ಸಂಸ್ಥೆಗಳ ಸುತ್ತ ಟೆಂಡರ್? ಕೆಲವು ವರ್ಷಗಳಿಂದ ದೊಡ್ಡ ಪ್ರಮಾಣದ ಟೆಂಡರ್ ಗಳು ಕೆಲವೇ ಸಂಸ್ಥೆಗಳಿಗೆ ದೊರೆಯುತ್ತಿದ್ದ ಎಂಬ ಆರೋಪಗಳು ಕೇಳಿಬಂದಿವೆ. ಟೆಂಡರ್ ಆಹ್ವಾನಿಸುವ ಮುನ್ನವೇ ನಿರ್ದಿಷ್ಟ ಸಂಸ್ಥೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅರ್ಹತಾ ಷರತ್ತುಗಳನ್ನು ರೂಪಿಸಲಾಗುತ್ತಿದೆ. ಈ ಆರೋಪಗಳಲ್ಲಿ ಸತ್ಯಾಂಶ ಇದೆಯೇ? ಎಂಬುದಕ್ಕೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸ್ಪಷ್ಟನೆ ನೀಡಬೇಕಾಗಿದೆ.

ಎಂಎಸ್‌ಎಂಇಗಳಿಗೆ ಸಮಾನ ಅವಕಾಶ ಸಿಗುತ್ತಿದೆಯೇ? ಕೋಟ್ಯಾಂತರ ಟೆಂಡರ್ ಗೆ ವೇಗ: ಮಕ್ಕಳಿಗೆ ಸೌಲಭ್ಯದಲ್ಲಿ ವಿಳಂಬ ಏಕೆ? ಉರ್ದು ಮತ್ತು ಅಲ್ಪಸಂಖ್ಯಾತ ಶಾಲೆಗಳತ್ತ ನಿರ್ಲಕ್ಷವೇ? ಕಳೆದ ಮೂರು ವರ್ಷಗಳಲ್ಲಿ ಸಮವಸ್ತ್ರ ಮತ್ತು ಶೂ ಪೂರೈಕೆಯ ಟೆಂಡರ್‌ಗಳನ್ನು ಯಾರಿಗೆ ನೀಡಲಾಗಿದೆ? ಟೆಂಡರ್ ಪಡೆದ ಸಂಸ್ಥೆಗಳು ಎಂಎಸ್‌ಎಂಇ ಅಥವಾ ಸ್ಥಳೀಯ ಉತ್ಪಾದಕರೇ? ಕಳೆದ ಮೂರು ವರ್ಷಗಳ ಟೆಂಡರ್ ಮೊತ್ತ ಹಾಗೂ ಗುತ್ತಿಗೆದಾರರ ಸಂಪೂರ್ಣ ವಿವರವನ್ನು ಸಾರ್ವಜನಿಕಗೊಳಿಸಲಾಗಿದೆಯೇ? 2025-26ನೇ ಸಾಲಿನಲ್ಲಿ ಎಷ್ಟು ಶಾಲೆಗಳಿಗೆ ಮತ್ತು ಸಾಕ್ ಪೂರೈಸಲಾಗಿದೆ? ಇನ್ನೂ ಎಷ್ಟು ಶಾಲೆಗಳಿಗೆ ಪೂರೈಕೆ ಬಾಕಿಯಿದೆ? ಪೂರೈಕೆ ವಿಳಂಬವಾಗಿದ್ದರೆ ಅದಕ್ಕೆ ಹೊಣೆಗಾರರು ಯಾರು? ಟೆಂಡರ್ ಷರತ್ತುಗಳನ್ನು ನಿರ್ದಿಷ್ಟ ಸಂಸ್ಥೆಗಳಿಗೆ ಅನುಕೂಲವಾಗುವಂತೆ ರೂಪಿಸಲಾಗಿದೆ ಎಂಬ ಆರೋಪದ ಬಗ್ಗೆ ತನಿಕೆ ನಡೆಸಲಾಗುವುದೇ?

ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿನದಲ್ಲಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಪೂರೈಸಬೇಕಾದ ಸಮವಸ್ತ್ರ, ಶೂ ಹಾಗೂ ಸಾಕ್ಸ್ ಗಳ ವಿತರಣೆ ತುರ್ತಾಗಿ ಪೂರೈಸುವಂತ ಅಧಿಕಾರಿಗಳಿಗೆ ಸೂಚನೆ ನೀಡಲು ಮಾನ್ಯ ಅಲ್ಪಸಂಖ್ಯಾತ ಇಲಾಖಾ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:-**

2025-26ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ಸರ್ಕಾರಿ ಮುಸ್ಲಿಂ ವಸತಿ ಶಾಲೆ ಹಾಗೂ ಡಾ|| ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳ 49,997 ವಿದ್ಯಾರ್ಥಿಗಳಿಗೆ ಎರಡು ಜೊತೆ ಶೂ ಒಟ್ಟು ರೂ.4,86,17,600/- ವೆಚ್ಚದಲ್ಲಿ ಹಾಗೂ ಎರಡು ಜೊತೆ ಸಿದ್ಧಪಡಿಸಿದ ಸಮವಸ್ತ್ರ(ಒಂದು ಜೊತೆ ಬಣ್ಣದ ಮತ್ತು ಒಂದು ಜೊತೆ ಬಿಳಿ ಬಣ್ಣದ)ಗಳು, ಎರಡು ಜೊತೆ ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ಒಟ್ಟು 8,72,42,446/- ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ(KTPP) ನಿಯಮಾನುಸಾರ ಟೆಂಡರ್ ಕರೆದು ಸರಬರಾಜು ಮಾಡಲಾಗಿರುತ್ತದೆ. ಕೆ.ಟಿ.ಪಿ.ಪಿ (KTPP) ಕಾಯ್ದೆಯನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾರದರ್ಶಕವಾಗಿ ಟೆಂಡರ್ ಆಹ್ವಾನಿಸಿ, ಸರಬರಾಜು ಆದೇಶದ ನಿಯಮಗಳನ್ವಯ ಸರಬರಾಜು ಮಾಡಲಾಗಿರುತ್ತದೆ ಹಾಗೂ ಸರಬರಾಜು ಪ್ರಕ್ರಿಯೆಯನ್ನು ಯಾವುದೇ ವಿಳಂಬವಿಲ್ಲದೇ ಪೂರ್ಣಗೊಂಡಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (KTPP) ಕಾಯ್ದೆಯ ನಿಯಮಗಳನ್ವಯ ಎಂಎಸ್‌ಎಂಇಗಳನ್ನು ಬೆಂಬಲಿಸಲು ಇಲಾಖೆಯು ಸಂಪೂರ್ಣವಾಗಿ ಬದ್ಧವಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಸ್ಥಳೀಯ ಉತ್ಪಾದಕರಿಗೆ ಮತ್ತು ನೋಂದಾಯಿತ ಎಂಎಸ್‌ಎಂಇಗಳಿಗೆ ಸಮಾನ ಅವಕಾಶಗಳನ್ನು ಒದಗಿಸಲಾಗಿದೆ. ಅಲ್ಲದೆ, ಸರ್ಕಾರದ ಪ್ರಸ್ತುತ ಖರೀದಿ ನೀತಿಗಳಿಗೆ ಅನುಗುಣವಾಗಿ, ಅರ್ಹ ಎಂಎಸ್‌ಎಂಇಗಳಿಗೆ ಇಎಮ್‌ಡಿ (EMD) ಮತ್ತು ವಹಿವಾಟು (Turnover) ವಿನಾಯಿತಿಗಳನ್ನು ನೀಡಲಾಗಿದೆ.

ಕಳೆದ ಮೂರು ವರ್ಷಗಳ ಎಲ್ಲಾ ಟೆಂಡರ್ ಅಧಿಸೂಚನೆಗಳು, ತಾಂತ್ರಿಕ ಮೌಲ್ಯಮಾಪನಗಳು, ಹಣಕಾಸು ಬಿಡ್‌ಗಳು ಮತ್ತು ಕಾರ್ಯಾದೇಶಗಳು ಸಾರ್ವಜನಿಕ ದಾಖಲೆಗಳಾಗಿದ್ದು, ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತವೆ.

ಟೆಂಡರ್ ಪ್ರಕ್ರಿಯೆಯಲ್ಲಿನ ಯಾವುದೇ ಅಕ್ರಮಗಳು ಇಲಾಖೆಯಲ್ಲಿ ನಡೆದಿರುವುದಿಲ್ಲ. ಪ್ರಸ್ತುತ ಟೆಂಡರ್ ಅನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (KTPP) ಕಾಯ್ದೆಯ ನಿಯಮಗಳ ಪ್ರಕಾರ ಪಾರದರ್ಶಕವಾಗಿ ನಡೆಸಲಾಗಿರುತ್ತದೆ.

2026-27ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ವಿವಿಧ ವಸತಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಸಂಪೂರ್ಣವಾಗಿ ಒದಗಿಸಲಾಗಿದ್ದು, ನೋಟ್‌ಪುಸ್ತಕ ಮತ್ತು ಲೇಖನಾ ಸಾಮಗ್ರಿಗಳ ಸರಬರಾಜು ಪೂರ್ಣಗೊಳ್ಳುವ ಹಂತದಲ್ಲಿದೆ. ಸಮವಸ್ತ್ರ ಹಾಗೂ ಶೂಗಳನ್ನು ಒದಗಿಸಲು ಟೆಂಡರ್ ಆಹ್ವಾನಿಸಿ ತಾಂತ್ರಿಕ ಬಿಡ್ ಪರಿಶೀಲನಾ ಹಂತದಲ್ಲಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರೊಂದಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಎಲ್ಲಾ ರೀತಿಯ ಅಗತ್ಯ ಕ್ರಮಕೈಗೊಳ್ಳಲಾಗುವುದು.

ಕಡತ ಸಂಖ್ಯೆ: MWD-LMQ/145/2026

**(ಯು.ಟಿ.ಖಾದರ್ ಫರೀದ್)**
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್
ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸಚಿವರು